Harassment of un-authorised cultivator of Forest-land in Mundgod.

128 SRI V. M. GHADI (Haliyal).—Will the Minister for Food and Forest be pleased to state:—

(a) whether it has come to the notice of Government that 38 downtrodden persons belonging to weaker section Bacharaki Village, Mundgod Taluk N. K. District were cultivating forest land unauthorisedly, in Yellapur Division (Plantation Corporation);

(b) whether Government is aware of the harassment to these people by the Divisional Forest Officer, Plantation Corporation on 22-7-1978;

(c) if so, what action Government has taken in the matter?

SRI G. RAME GOWDA(Minister for Food and Forest).—

(a) No persons were cultivating forest lands of Bechanaki village (Not Becharki village) Mundgod Taluk, unauthorisedly. But they made an attempt to cultivate the forest land unauthorisedly.

(b) The forest area under reference was cleared and the plantation was raised by the Karnataka Forest Plantation Corporation by spending thousands of rupees. But the people removed the seedlings planted by the Corporation and tried to plough the area.

A complaint was lodged with the Police against such people who were trying to encroach Forest lands. No harassment was caused to these people.

(c) In view of reply to (b) above this does not arise.

ಶ್ರೀ ವಿ. ಎಂ. ಘಾಡಿ.—ಮುಂಡಗೋಡ್ ತಾಲ್ಲೂಕಿನ ಬೆಚಾರ್ಕಿ ಗ್ರಾಮದ ಸುಮಾರು ೪೦ ಮಂದಿ ದುರ್ಬಲ ವರ್ಗದವರು ಅರಣ್ಯ ಇಲಾಖೆಗೆ ಸೇರಿದ ಜಮೀನಿನಲ್ಲಿ ಕಳೆದ ೪-೫ ವರ್ಷಗಳಿಂದಲೂ ಅತಿಕ್ರಮಣವಾಗಿ ಸಾಗುವಳಿ ಮಾಡಿಕೊಂಡು ಬತ್ತವನ್ನು ಬೆಳೆಯುತ್ತಿದ್ದಾರೆ. ತಮ್ಮ ಉತ್ತರದಲ್ಲಿ ಪ್ಲಾಂಟೇಷನ್ ಅತಿಕ್ರಮಣ ಮಾಡಿದ್ದಾರೆಂದು ಹೇಳಿದ್ದೀರಿ? ಇದು ಸತ್ಯಕ್ಕೆ ದೂರವಾದ ಮಾತು, ಇದರ ಬಗ್ಗೆ ಮತ್ತೊಮ್ಮೆ ಪರಿಶೀಲನೆ ಮಾಡುತ್ತೀರಾ?

†ಶ್ರೀ ಜಿ. ರಾಮೇಗೌಡ.—ಪರಿಶೀಲನೆ ಮಾಡಿಸಿ ಅಧಿಕಾರಿಗಳಿಂದ ಉತ್ತರ ಕೊಟ್ಟಿರುವುದು. ಅರಣ್ಯ ಇಲಾಖೆಯವರು ಪ್ಲಾಂಟೇಷನ್ ಕಾರ್ಪೊರೇಷನ್ನಿಗೆ ಕೊಟ್ಟಮೇಲೆ ಸಸಿ ನೆಟ್ಟಿದ್ದಾರೆ. ನೆಟ್ಟ ಸಸಿಗಳನ್ನು ಸಿಲ ಮಂದಿ ಹೋಗಿ ಕಿತ್ತು, ಹಾಕಿ ಉಳುಮೆ ಮಾಡುವುದಕ್ಕೆ ಪ್ರಯತ್ನ ಮಾಡಿದಾಗ ಪೋಲೀಸಿನವರಿಗೆ ದೂರು ಕೊಡಲಾಗಿದೆ.

ಶ್ರೀ ವಿ. ಎಂ. ಘಾಡಿ.—ನಾನು ಪ್ರತ್ಯಕ್ಷವಾಗಿ ನೋಡಿದ್ದೇನೆ, ಬತ್ತ ಬೆಳೆದಮೇಲೆ ಪ್ಲಾಂಟೇಷನ್ ಮಾಡಿದ್ದಾರೆ.

ಶ್ರೀ ಜಿ. ರಾಮೇಗೌಡ.—ಈ ವಿಚಾರ ಕೋರ್ಟಿಗೆ ಹೋಗಿದೆ, ಇದರ ಬಗ್ಗೆ ನಾನು ಏನೂ ಹೆಚ್ಚಿಗೆ ಹೇಳಲಾರೆ.

ಶ್ರೀ ವಿ. ಎಂ.ಘಾಡಿ – ಕೋರ್ಟಿಗೆ ಹೋಗಿರೋದು ಕ್ರಿಮಿನಲ್ ಕೇಸ್‌ಗೆ ಸಂಬಂಧಪಟ್ಟದು. ಯಾವ ವರ್ಷ ಪ್ಲಾಂಟೇಷನ್ ಮಾಡಿದ್ದಾರೆ ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಜಿ. ರಾಮೇಗೌಡ.—ನನ್ನಲ್ಲಿರತಕ್ಕ ಮಾಹಿತಿ ಮೇರೆಗೆ ಸುಗ್ರೀವಾಜ್ಞೆ ಬಂದಮೇಲೆ ಅತ್ರಿ ಕ್ರಮಣ ಮಾಡಿದ್ದಾರೆ.

ಶ್ರೀ ವಿ. ಎಂ. ಘಾಡಿ.—ಯಾವ ವರ್ಷದಲ್ಲಿ ಏರಿಯಾ ಕ್ಲಿಯರೆನ್ಸ್ ಆಯಿತು ? ಯಾವ ವರ್ಷದಲ್ಲಿ ಪ್ಲಾಂಟೇಷನ್ ಮಾಡಿದ್ದಾರೆ ?

ಶ್ರೀ ಜಿ. ರಾಮೇಗೌಡ.—ಕ್ಲಿಯರೆನ್ಸ್ ತಾರೀಖು ನನ್ನಲ್ಲಿ ಇಲ್ಲ, ಮಾನ್ಯ ಸದಸ್ಯರಿಗೆ ಬೇಕಾದರೆ ತಿಳಿಸುತ್ತೇನೆ.

Starting of Agricultural College at Shimoga

178 SRI G. BASAVANNAPPA (Holehonnur).—Will the Minister for Agriculture and Parliamentary Affairs be pleased to state —

(a) whether there is any proposal before the Government for Starting an Agricultural College in Shimoga ;

(b) if so, at what stage is the proposal ?

SRI K. H. RANGANATH, (Minister for Agricu'ture and Parliamentary Affairs)

(a) No.

(b) Does not arise

ಶ್ರೀ ಜಿ. ಬಸವಣ್ಣಪ್ಪ.—ಇಡೀ ಮಲೆನಾಡಿನಲ್ಲಿಯೇ ಸರ್ಕಾರೀ ಟೆಕ್ನಿಕಲ್ ಕಾಲೇಜು ಇಲ್ಲ. ಶಿವಮೊಗ್ಗ ಜಿಲ್ಲೆ ವ್ಯವಸಾಯ ಪ್ರಧಾನವಾದ ಜಿಲ್ಲೆಯಾಗಿದ್ದು ಅಲ್ಲಿ ಒಂದು ಕೃಷಿ ಕಾಲೇಜು ಇಲ್ಲ? ಇವತ್ತು ಕೃಷಿಯನ್ನು ವೈಜ್ಞಾನಿಕವಾಗಿ ಮಾಡಬೇಕಾದರೆ ಕೃಷಿ ಕಾಲೇಜಿನ ಅವಶ್ಯಕತೆ ಇದೆ. ಆದುದರಿಂದ ಈ ಬಗ್ಗೆ ಸರ್ಕಾರದವರು ಮರು ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಕೆ. ಹೆಚ್. ರಂಗನಾಥ್.—ಸಮಯ ಬಂದಾಗ ಮರು ಪರಿಶೀಲನೆ ಮಾಡೋಣ.

ಶ್ರೀ ಜಿ. ಬಸವಣ್ಣಪ್ಪ.—ಈಗ ಹಾಲಿ ಇರತಕ್ಕ ಕಾಲೇಜುಗಳಲ್ಲಿ ಅಡ್ಮಿಷನ್‌ಗೆ ತೊಂದರೆಯಿರುವುದರಿಂದ ಬೇರೆ ಕಡೆ ಕಾಲೇಜು ಸ್ಥಾಪನೆ ಮಾಡುವಂತ ಯೋಚನೆ ಸರ್ಕಾರಕ್ಕಿದೆಯೆ ?

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಸದಸ್ಯರು ಅಡ್ಮಿಷನ್‌ಗೆ ತೊಂದರೆಯಿರುವುದರಿಂದ ಬೇರೆ ಕಾಲೇಜು ಸ್ಥಾಪನೆ ಮಾಡಿ ಎನ್ನುವ ಅಭಿಪ್ರಾಯ ಸರ್ಕಾರ ಒಪ್ಪುವುದಿಲ್ಲ. ಏಕೆಂದರೆ, ನಮಗೆ ಎಷ್ಟು ಜನ ವ್ಯವಸಾಯ ಪದವೀಧರರು ಬೇಕೋ ಅಷ್ಟು ಜನರನ್ನು ತಯಾರು ಮಾಡುವುದಕ್ಕೆ ಇಂದು ಸಾಧ್ಯ ಇದೆ. ಆದರೆ, ಬೇರೆ ಕಾರಣದಿಂದ ಸರ್ಕಾರ ಯೋಚನೆ ಮಾಡತಕ್ಕದ್ದು ಇದೆ.

ಶ್ರೀ ಎಸ್. ಎಂ. ಶೀರ್ನಾಳಿ ಜಂದ್ರಶೇಖರ್.—ಸ್ವಾಮಿ, ಶಿವಮೊಗ್ಗ ಜಿಲ್ಲೆಯನ್ನು ಹಳೇ ಮೈಸೂರು ಕಾಲದಲ್ಲಿ ಬತ್ತದ ಕಣಜ ಎಂದು ಕರೆಯುತ್ತಿದ್ದರು, ಇಂದಿಗೂ ಆ ಹೆಸರು ಇದೆ. ವ್ಯವ